ಇದು ಚುನಾವಣೆಗೆ ಸಂಬಂಧಿಸಿದ ವಿಚಾರವೇ.

"ಅಬ್ದುಲ್ಲಾ ನಿನಗೆ ಗೊತ್ತು. ಇನ್ನು ಹತ್ತು ತಿಂಗಳಿಗೆ ಚುನಾವಣೆ ಇದೆ. ಪಾರ್ಟಿ ವಿಚಾರ ಗೊತ್ತಲ್ವಾ. ಕೆಲಸ ಮಾಡಿಸಿಕೊಳ್ಳುವಷ್ಟು ದಿನ ಮಾಡಿಸಿಕೊಳ್ಳುತ್ತದೆ... ಆಮೇಲೆ ಪಕ್ಕಕ್ಕಿಡುತ್ತದೆ. ಈಗಿನ ವ್ಯವಹಾರವೂ ಹಾಗೇ ಇದ್ದಂತಿದೆ. ನೀನು ಕೂಡ ಇಲ್ಲೇ ಇರ್ತೀಯ... ಈ ಸಲ ನನಗಲ್ಲದೆ ಆ ತಳಕ್ ಬಳಕ್ ನನ್ಮಗ ಇದ್ದಾನಲ್ವಾ... ಭೀಮಣ್ಣ, ಅವನಿಗೆ ಟಿಕೆಟ್ ಕೊಡಬೇಕೆಂದು ನೋಡುತ್ತಿದ್ದಾರೆ. ನನ್ನ ಕರ್ಮಕ್ಕೆ ಅವನೂ ನನ್ನ ಜಾತಿಯೋನೆ. ಬಾಯಿ ಕಟ್ಟಿ ಹಾಕಿದ ಹಾಗಾಗಿದೆ. ನನಗೆ ಅಥವಾ ಅವನಿಗೆ ಯಾರಿಗೆ ಕೊಟ್ಟರೂ ನಮ್ಮ ಜಾತಿಯ ಓಟುಗಳು ಗ್ಯಾರಂಟಿ ಎಂಬುದು ಪಾರ್ಟಿಯ ಲೆಕ್ಕಾಚಾರ. ಅದೇ ನಡೆದರೆ ನಾನು ಬಂಡಾಯ ಅಭ್ಯರ್ಥಿಯಾಗಿಯಾದರೂ ಸ್ಪರ್ಧಿಸುತ್ತೇನೆ. ಆಗ ನಮ್ಮ ಜಾತಿಯ ವೋಟುಗಳು ವಿಭಜನೆಯಾಗಿ, ಉಳಿದ ಜಾತಿಯ ವೋಟುಗಳು ಕೂಡ ನನಗೇ ಬಿದ್ದು ಗೆಲ್ಲುತ್ತೇನೆ ಎಂದು ಪಾರ್ಟಿಗೆ ಆಪ್ತವಾಗಿರುವ ಒಂದಿಬ್ಬರ ಹತ್ತಿರ ಹೇಳಿಕೊಂಡು ಬರುತ್ತಿದ್ದೇನೆ. ಆ ಭಯ ಪಾರ್ಟಿಯಲ್ಲಿ ಹಾಗೇ ಇರಬೇಕೆಂದರೆ ಈ ಕ್ಷೇತ್ರದಲ್ಲಿ ಈ ಹತ್ತು ತಿಂಗಳು ನಾನು ಮಾಡುವ ಮೀಟಿಂಗ್‌ಗಳಲ್ಲಿ ಜನ ಹೆಚ್ಚಾಗಿ ಕಾಣಿಸಬೇಕು. ನೀನೇನು ಮಾಡ್ತೀಯೋ ನನಗೆ ಗೊತ್ತಿಲ್ಲ" ಎಂದ.

ಅಬ್ದುಲ್ಲಾ ಒಂದು ನಿಮಿಷ ಯೋಚಿಸಿದ.

ಒಂದೇ ಪಕ್ಷ. ಒಂದೇ ಕ್ಷೇತ್ರದ ರೂಲಿಂಗ್ ಎಂಎಲ್ಎ ಅವರನ್ನು ಎದುರುಹಾಕಿಕೊಂಡು ಬದುಕಲಾರೆವು. ಯಾಕಪ್ಪ ಫಜೀತಿ ಎಂದುಕೊಂಡ.

"ಸರಿ ಸಾರೂ. ನೀವಷ್ಟು ಹೇಳಬೇಕಾ. ಇನ್ನು ಮುಂದೆ ನೀವು ಎಲ್ಲಿ ಪಕ್ಷದ ಸಭೆ ನಡೆಸಿದರೂ ನನ್ನ ವಾರ್ಡ್‌ನಿಂದ ಜನ ಅಲ್ಲಿರ್ತಾರ್ವ್" ಎಂದ.

"ಸುಮ್ಮನೆ ಇರೋದಲ್ವೋ. ಸಿದ್ಧತೆಗಳು ಭರ್ಜರಿಯಾಗಿರಬೇಕು. ಮುಖ್ಯವಾಗಿ ನೆನಪಿಟ್ಟುಕೋ... ಮಹಿಳೆಯರು ಹೆಚ್ಚಾಗಿ ಕಾಣಿಸಬೇಕು. ಆಗಲೇ ಸಿಂಪತಿ ವರ್ಕೌಟ್ ಆಗಿ ನಾವು ಅಂದುಕೊಳ್ಳುವುದು ಆಗುವುದು. ಮೊದಲೇ ಮುಸ್ಲಿಂ ಹೆಂಗಸರಲ್ಲವಾ... ಬುರ್ಖಾಗಳು ಹೆಚ್ಚು ಕಾಣಿಸದ ಹೊರತು ಪಾರ್ಟಿಯವರು ನನಗೆ ಅಲ್ಪಸಂಖ್ಯಾತರಲ್ಲಿ ಸಾಕಷ್ಟು ಬೆಂಬಲಿಗರಿದ್ದಾರೆಂದು ನಂಬುವುದಿಲ್ಲ" ಎಂದ.

"ಆಯ್ತು ಸಾರೂ." ಎಂದು ಹೇಳಿ ಮನೆಗೆ ಬಂದ ಅಬ್ದುಲ್ಲಾ.

ಇದು ನಡೆದ ಮೂರನೇ ದಿನ ಎಂಎಲ್ಎ ಕಟ್ಟಪ್ಪನ ಕಡೆಯ ವ್ಯಕ್ತಿ 'ರಾಮುಲು' ಟಿವಿಎಸ್‌ನಲ್ಲಿ ನೇರವಾಗಿ ಅಬ್ದುಲ್ಲಾನ ಮನೆಗೆ ಬಂದು, "ಈ ಭಾನುವಾರವೇ ಗಾಂಧಿ ರಸ್ತೆಯಲ್ಲಿ ಮೀಟಿಂಗ್. ಅಣ್ಣ ಹೇಳ್ಬಿಟ್ಟು ಬಾ ಅಂದರು. ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರನ್ನು ಕರೆದುಕೊಂಡು ಬರುವಂತೆ ಹೇಳಿದ್ದಾರೆ" ಎಂದು ಹೇಳಿ ಹೊರಟುಹೋದ.

ಅವನು ಅಬ್ದುಲ್ಲಾನ ಉತ್ತರಕ್ಕೂ ಕಾಯಲಿಲ್ಲ. 'ಅವನು. ದುರಹಂಕಾರಿ. ಆ ಎಂಎಲ್ಎ ಆದರೂ ಹೇಳಿದ ಮಾತು ಕೇಳುತ್ತಾರೇನೋ, ಇವನು ಮಾತ್ರ ಕೇಳುವುದಿಲ್ಲ' ಮನಸ್ಸಿನಲ್ಲಿಯೇ ಗೊಣಗಿಕೊಂಡು ಮೀಟಿಂಗಿಗೆ ಸಾಧ್ಯವಾದಷ್ಟು ಮಂದಿಯನ್ನು ಸೇರಿಸುವ ಕೆಲಸದಲ್ಲಿ ಅಬ್ದುಲ್ಲಾ ನಿರತನಾದ.

ವಾರ್ಡ್‌ನ ಮೂಲೆ ಮೂಲೆಗೂ ರಾಯಲ್ ಎನ್‌ಫೀಲ್ಡ್ ಬೈಕಿನಲ್ಲಿ ಸುತ್ತಾಡಿ 'ಅರೆ ಬಾಯ್... ಓ ಬೆಹೆನ್, ಚಾಚೀ... ಆಪ್... ತುಮ್ ಬೀ' ಎನ್ನುತ್ತಾ ಎಲ್ಲರಿಗೂ ಹೇಳಿಬಂದ.

"ಮೀಟಿಂಗಿಗೆ ಮೈತುಂಬ ಬುರ್ಖಾಗಳನ್ನು ಹಾಕಿಕೊಂಡು ಬರಬೇಕು" ಎಂದು ಹೇಳುವುದನ್ನು ಮರೆಯಲಿಲ್ಲ.